## ನವಿಲುಗನ್ನಡಿ

ಡಿಸೆಂಬರ್ 2015ರ 'ಮಯೂರ' ಮುಖಪುಟ ಮನಮೋಹಕವಾಗಿತ್ತು. ಪ್ರಕಟಗೊಂಡ ಎಲ್ಲಾ ಕತೆಗಳೂ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋದವು.

ಜಿ.ವಿ. ಪ್ರಭು, ಬೆಂಗಳೂರು

'ರಾಜೀವ ತಾರಾನಾಥರ ಜತೆ ಒಂದು ದಿನ' ಲೇಖನ (ರಹಮತ್ ತರೀಕೆರೆ) ರಾಜೀವರ ಪರಿಚಯ ಮಾಡಿಕೊಡುವುದರ ಜೊತೆಗೆ ಮುದ ನೀಡಿತು. ಉತ್ತಮ ಗದ್ಯ ಹೇಗಿರಬೇಕೆಂಬುದನ್ನು ಅದು ತೋರಿಸಿಕೊಟ್ಟಿದೆ.

ಕೆ. ರಮೇಶ ಗೋಟ, ಬೆಂಗಳೂರು

ಸಾಹಿತ್ಯ–ಸಂಗೀತ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ರಾಜೀವರು ಆಪ್ತವಾಗಿ ತಮ್ಮನ್ನು ತಾವು ರಹಮತ್ ಜೊತೆಗಿನ ಮಾತುಕತೆಯಲ್ಲಿ ತೆರೆದುಕೊಂಡಿದ್ದಾರೆ.

ಆದರೆ, ಆರ್.ಕೆ. ನಾರಾಯಣರ ಒಂದು ಕಾದಂಬರಿಯನ್ನು 'ಬೇಜವಾಬ್ದಾರಿ ಕಾದಂಬರಿ' ಎಂದು ರಾಜೀವರು ಹೇಳಿರುವುದು ಯಾಕೋ ಸರಿ ಅನಿಸಲಿಲ್ಲ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಕುಂ. ವೀರಭದ್ರಪ್ಪನವರ ಕತೆ 'ಕೂಳು' ಇವತ್ತಿಗೂ ಅನ್ವಯಿಸುವ ಕತೆಯಾಗಿದೆ.

ಇದರೊಂದಿಗೆ ನನಗೆ ಮೆಚ್ಚುಗೆ, ದುಃಖ ಎರಡನ್ನೂ ತಂದ ಲೇಖನ ನನ್ನ ತಾಲ್ಲೂಕಿನವರಾದ ಕಿಕ್ಕೇರಿಯ ಕೆ.ಎಸ್.ಎಲ್. ಸ್ವಾಮಿ(ರವೀ)ಯವರ ಕುರಿತದ್ದು. ಬಿ. ಸುರೇಶ ಅವರ ಈ ಲೇಖನವು ರವಿಯವರ ಮತ್ತೊಂದು ಮುಖವನ್ನು ತೆರೆದಿಟ್ಟಿದೆ.

ಬಲ್ಲೇನಹಳ್ಳಿ ಮಂಜುನಾಥ್, ಮಂಡ್ಯ




ಎಲ್ಲಾ ಕಥೆಗಳು ಓದಿಸಿಕೊಂಡು ಹೋದವು. ಬನವಾಸಿ ವೆಂಕಟೇಶ ದೀಕ್ಷಿತರ ಕತೆ 'ಏಳು ಬಣ್ಣದ ಬಿಲ್ಲು' ಮಾತ್ರ ವಿಚಿತ್ರ ತಿರುವು ಪಡೆದು ಸುಖಾಂತ್ಯವಾಯಿತು.

ನಮ್ಮ ಮನಸ್ಸಿನ ಭಾವನೆಯನ್ನು ಹೊರ ಹೊಮ್ಮಿಸುವ 'ಮಯೂರ' ಓದುವುದೆಂದರೆ ನನಗೆ ತುಂಬಾ ಇಷ್ಟ.

ಕುಸುಮಾ, ಬೆಜ್ಜವಳ್ಳಿ

ಈ ಸಂಚಿಕೆ ತುಂಬಾ ಖುಷಿ ಕೊಟ್ಟಿತು. ಸ್ವೆಟ್ಲಾನ ಅಲೆಕ್ಸಿವಿಚ್ ಅವರ ಬರಹ 'ಕೊನೆಯ ಸಾಕ್ಷಿಗಳು' ಅನುವಾದಿಸಿ ಓದುಗರಿಗೆ ಕೊಟ್ಟಿದ್ದೀರಿ. ಓದಿ ಸಂತೋಷವಾಯ್ತು.

ಶ್ಯಾಮಲಾ ಮಾಧವ, ಮುಂಬೈ

ಬಹುಕಾಲದ ಬಳಿಕ ಈಶ್ವರಚಂದ್ರ ಅವರ ಕತೆಯನ್ನು 'ಮಯೂರ'ದಲ್ಲಿ ಕಂಡೆ. ಮೂರು ಅಂತ್ಯಗಳು ಇರುವ ಅವರ 'ಸಾಗರದಂಥ ಕಣ್ಣಿನ ಹುಡುಗಿ' ಅತ್ಯಂತ ಕುತೂಹಲಕಾರಿಯಾಗಿದೆ.

ಸುಮನಾ ಗುಂಡಬಾಳ, ಬೆಂಗಳೂರು

ಇದು ವೈವಿಧ್ಯಮ ಬರಹಗಳ ಸಂಚಿಕೆ. 'ಪೇಶಂಟ್ ಪಾರ್ಕಿಂಗ್'ಮನಕಲಕುವ ಕತೆ.

ಸತ್ಯಶ್ರೀ ಜಿ.ಕೆ., ಮೈಸೂರು